OS No.187-17
PW-1

ದಿನಾಂಕಃ23/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಜಿ.ಎನ್.ಎಸ್ ವಕೀಲರಿಂದಃ**

ದಾವಾಐಟಂ ನಂ.**2** ರ ಸ್ವತ್ತು **1** ನೇ ಪ್ರತಿವಾದಿಯ ಮಗನಾದ ವಿಶ್ವನಾಯ್ಕರವರ ಹೆಸರಿನಲ್ಲಿದೆ**.** ವಿಶ್ವನಾಯ್ಕನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ**.** ದಾವಾಸ್ವತ್ತುಗಳ ಚೆಕ್ಕುಬಂಧಿ ನೆನಪಿಲ್ಲ**.** ನನ್ನ ಸೋದರಮಾವನ ಹೆಸರು ಕಾಳಿಂಗನಾಯ್ಕ ಎಂದರೆ ಸರಿ**.** ಅವನೊಂದಿಗೆ ನನ್ನ ಒಡನಾಟ ಮೊದಲಿನಿಂದಲೂ ಇದೆ ಎಂದರೆ ಸರಿ**.** ಕಾಳಿಂಗನಾಯ್ಕನ ಮಗಳನ್ನು ನಾನು ಮದುವೆಯಾಗಿದ್ದೇನೆ**.** ನನ್ನ ತಂದೆ ಮರಣ ಹೊಂದಿ **10-12** ವರ್ಷಗಳಾಯಿತು**.**

ನಾನು ಚಿಕ್ಕವನಿದ್ದಾಗಿನಿಂದಲೂ ನನ್ನ ತಂದೆಯ ದಾವಾಜಮೀನುಗಳನ್ನು **1, 2** ಮತ್ತು **4** ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆಂಬ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತ ಇದ್ದಾಗ ದಾವಾಸ್ವತ್ತುಗಳ ಬಾಬ್ತು ಹಿಸ್ಸೆಯನ್ನು ಕೇಳಿಲ್ಲ. ನಮ್ಮ ತಂದೆಯೇ ನಮ್ಮ ಮನೆಯ ಜಯಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಮತ್ತು ತಾಯಿ ಪರಸ್ಪರ ಸರಿಯಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ತಂದೆ ಮತ್ತು ಮಕ್ಕಳನ್ನು ಬಿಟ್ಟು ಬೇರೆ ಬೇರೆ ಕಡೆ ಹೋಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಅನೇಕ ಕಡೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

ದಾವಾಐಟಂ ನಂ.**1** ನ್ನು ನನ್ನ ತಂದೆ ಸೋಮ್ಲನಾಯ್ಕನಿಗೆ ಮಾರಾಟ ಮಾಡಿದ್ದಾಗ ನನಗೆ ಒಂದುವರ್ಷವಾಗಿತ್ತು. ಗೃಹಕೃತ್ಯದ ಸಾಲ ತೀರಿಸಲು ಅನಿವಾರ್ಯವಾಗಿ ನನ್ನ ತಂದೆ ಸದರಿ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. **2** ನೇ ಪ್ರತಿವಾದಿ ಖರೀದಿಸಿದ ನಂತರ ಸದರಿ ಜಮೀನನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಮಾಡಿದ್ದರು ಎಂದರೆ ಸರಿಯಲ್ಲ. ಖರೀದಿಸಿದಾಗಿನಿಂದಲೂ **2** ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ಅಡಿಕೆ ಬೆಳೆಯುತ್ತಿದ್ದಾರೆ ಈಗಲು ಸಹ ಅಡಿಕೆ ಬೆಳೆ ಬೆಳೆಯುುತ್ತಿದ್ದಾದರೆ ಎಂದರೆ ಸರಿ.

**1** ನೇ ಪ್ರತಿವಾದಿ ದಾವಾಐಟಂ ನಂ.**2** ನ್ನು ಖರೀದಿಸಿದ ನಂತರ ಮೆಕ್ಕೆಜೋಳ ಬೆಳೆಯುತ್ತಿದ್ದಾನೆ ಎಂದರೆ ಸರಿ. **4** ನೇ ಪ್ರತಿವಾದಿ ಐಟಂ ನ.**3** ನ್ನು ಖರೀದಾಗಿಸಿನಿಂದ ಅಡಿಕೆ ಬೆಳೆ ಬೆಳೆಯುತ್ತಿದ್ದಾನೆ ಎಂದರೆ ಸರಿ. ಪ್ರತಿವಾದಿಯರು ಎಲ್ಲಾ ಜಮೀನುಗಳಲ್ಲಿ ಬೋರ್ವೆಲ್ ಕೊರೆಸಿದ್ದಾರೆ ಎಂದರೆ ಸರಿ. ಜಮೀನುಗಳ ಮೇಲೆ ಬ್ಯಂಕಿನಲ್ಲಿ ಸಾಲ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ.

ದಾವಾಸ್ತಿಗಳನ್ನು ನನ್ನ ತಂದೆ ಮಾರಾಟ ಮಾಡಿದಾಗ ನನಗೆ ಮನೆಯ ವ್ಯವಹಾರಗಳ ಬಗ್ಗೆ ತಿಳುವಳಿಕೆ ಇರಲಿಲ್ಲ ಎಂದರೆ ಸರಿ. ದಾವಾಸ್ತಿಗಳು ಇತ್ತೀಚೆಗೆ ಅಭಿವೃದ್ದಿಗೊಂಡಿವೆ ಎಂದರೆ ಸರಿ. ನಮ್ಮನ್ನು ನಮ್ಮ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮದ್ಯಪಾನ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ

ತಂದೆ ದಾವಾಜಮೀನುಗಳನ್ನು ಮಾರಾಟ ಮಾಡದೆ ಇದ್ದರೇ ಕುಟುಂಬಕ್ಕೆ ತೊಂದರೆ ಆಗುತ್ತಿತ್ತುಎಂದರೆ ಸರಿಯಲ್ಲ. ನಾನು ಪ್ರಾಪ್ತ ವಯಸ್ಕನಾದ ನಂತರವೂ ಸಹ ನನಗೆ ನನ್ನ ತಂದೆ ದಾವಾಸ್ತಿಗಳನ್ನು ಮಾರಾಟ ಮಾಡಿದ ವಿಷಯ ತಿಳಿದಿರಲಿಲ್ಲ.

ಪ್ರತಿವಾದಿಯರು ನನ್ನ ತಂದೆಗೆ ಗೃಹಕೃತ್ಯದ ಮತ್ತು ಸಾಲದ ಅಡಚಣೆ ಇದೆ ಎಂದು ಮನಗಂಡು ದಾವಾಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳನ್ನು ನನ್ನ ತಂದೆ ನಮ್ಮಕುಟುಂಬಕ್ಕೆ ಅನುಕೂಲವಾಗಲು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿರುವ ಕ್ರಯಪತ್ರಕ್ಕೆ ನಾವು ಸಹ ಬಾದ್ಯಸ್ಥರು ಎಂದರೆ ಸರಿಯಲ್ಲ. **1, 2** ಮತ್ತು **4** ನೇ ಪ್ರತಿವಾದಿಯರು ದಾವಾಸ್ವತ್ತಿನ ಆಗಿನ ಮಾರುಕಟ್ಟೆ ಬೆಲೆಗೆ ಖರೀದಿ ಮಾಡಿರುವುದರಿಂದ ಪ್ರಾಮಾಣಿಕ ಖರೀದಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದಲೂ ಪ್ರತಿವಾದಿಯರು ನಿರಂತರ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಕಾಲಮಿತಿ ಮೀರಿದ ದಾವೆ ಸಲ್ಲಿಸಲು ಕಾಲಮಿತಿಯನ್ನು ಸೃಷ್ಟಿಸಿಕೊಂಡು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿದ ಜಮೀನುಗಳಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನನಗೆಎಲ್ಲಾ ವಿಷಯ ಗೊತ್ತಿದ್ದರೂ ಸಹ ಬೇರೆಯವರ ಮಾತು ಕೇಳಿ ಅಕ್ರಮ ಲಾಭಹೊಂದಲು ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಓ.ಕೇ.ಸ.ಇ.ಎ.ಒ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,
ಶಿಕಾರಿಪುರ.